# ದಿನಾಂಕ:06-12-2021 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಂಖ್ಯೆ.38 ಹೆಚ್.ಎಂ.ಟಿ. ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು

**ಹಾಜರಿದ್ದ ಅಧಿಕಾರಿಗಳು:**

1. ಹೆಚ್.ಬೀಮೇಶ್, ಕಾರ್ಯಪಾಲಕ ಅಭಿಯಂತರರು(ಘನತ್ಯಾಜ್ಯ ನಿರ್ವಹಣೆ ಬಿಬಿಎಂಪಿ ಹಾಗೂ ವಾ.38ರ ನೋಡಲ್ ಅಧಿಕಾರಿಗಳು)
2. ಬಿ.ಎನ್.ಲಕ್ಷ್ಮೀಶ್ ಗೌಡ, ಸಹಾಯಕ ಅಭಿಯಂತರರು, (ವಾರ್ಡ್ ನಂ.38) ಮತ್ತು ಸಂಚಾಲಕರು.
3. ರಮೇಶ್, ಸಹಾಯಕ ಕಂದಾಯ ಅಧಿಕಾರಿ, ಲಕ್ಷ್ಮಿದೇವಿನಗರ.
4. ನಾರಾಯಣ್, ಹಿರಿಯ ಆರೋಗ್ಯ ಪರಿವೀಕ್ಷಕರು, (ವಾರ್ಡ್ ನಂ.38)
5. ಸತೀಶ್, ಕಂದಾಯ ಪರಿವೀಕ್ಷಕರು, ಹೆಚ್.ಎಂ.ಟಿ.ವಾರ್ಡ್ ನಂ.38.
6. ಡಾ॥ಜಿ.ಎಂ.ರೇಣುಕಾ ಪ್ರಸಾದ್, ಎಂ. ಓ., ನಂದಿನಿ ಬಡಾವಣೆ.
7. ಡಾ॥ ಅಹಲ್ಯ ಕೆ. ನಂದಿನಿ ಬಡಾವಣೆ.
8. ಆಂಜನೇಯಲು, ಕಂದಾಯ ವಸೂಲಿಗಾರರು, ವಾರ್ಡ್ ನಂ.38.
9. ಬೈಲವೆಂಕಟಪ್ಪ, ಹೆಡ್ ಗ್ಯಾಂಗ್ ಮ್ಯಾನ್ ಹೆಚ್.ಎಂ.ಟಿ.ವಾರ್ಡ್ ನಂ.38.
10. ಮೋಹಿನಿ, ಲಿಂಕ್ ವರ್ಕರ್ ವಾರ್ಡ್ ನಂ.38.
11. ಭಾರತಿ, ಲಿಂಕ್ ವರ್ಕರ್ ವಾರ್ಡ್ ನಂ.38.
12. ರಾಜು, ಮರ್ಷಲ್ ವಾರ್ಡ್ ನಂ.38.
13. ಕಾಂತರಾಜ್, ಮರ್ಷಲ್ ವಾರ್ಡ್ ನಂ.38.
14. ಧನಂಜಯ, ಸೂಪರ್ ವೈಸರ್ ವಾರ್ಡ್ ನಂ.38.
15. ಹನುಂತಯ್ಯ, ಗುತ್ತಿಗೆದಾರು ವಾರ್ಡ್ ನಂ.38.

ಮಾನ್ಯ ಅಧ್ಯಕ್ಷರು, ಮೇಲೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರ ಸಮ್ಮುಖದಲ್ಲಿ ವಾರ್ಡ್ ಸಂಖ್ಯೆ 38ರ ಕಾರ್ಯದರ್ಶಿಗಳು ಹಾಗೂ ಕಂದಾಯ ಪರಿವೀಕ್ಷಕರನ್ನು ಸಭೆಯನ್ನುದ್ದೇಶಿಸಿ ಸ್ವಾಗತ ಕೋರಿದರು.

ಡಾ. ರೇಣುಕಾ ಪ್ರಸಾದ್ ರವರು ವಾರ್ಡ್ 38ರಲ್ಲಿ ಕೋವಿಡ್-19 ಪ್ರಕರಣಗಳು ಹೆಚ್ಚಾಗುವ ಸಾಧ್ಯತೆ ಇದ್ದು, ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಲಾಗಿರುತ್ತದೆ ಹಾಗೂ ಚುಚ್ಚುಮದ್ದು ನೀಡುವ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಕ್ರಮಗಳು ಮುಂದುವರೆದಿರುತ್ತದೆ ಎಂದು ತಿಳಿಸಿರುತ್ತಾರೆ.

ಸಹಾಯಕ ಅಭಿಯಂತರರು ರವರು ಮಾತನಾಡಿ ಎಸ್.ಆರ್.ಎಸ್. ಸಿಗ್ನಲ್ ಬಳಿ ರಸ್ತೆ ಗುಂಡಿಗಳು ಹೆಚ್ಚಾಗಿದ್ದು, ಮೇಜರ್ ರೋಡ್ಸ್ ವಿಭಾಗಕ್ಕೆ ತಿಳಸುವುದಾಗಿ ತಿಳಿಸಿರುತ್ತಾರೆ. ಹಾಗೂ ವಾರ್ಡ್‌ನಲ್ಲಿ ರಸ್ತೆ ಗುಂಡಿಗಳನ್ನು ಪತ್ತೆ ಮಾಡಿ ಕ್ರಮ ವಹಿಸಲಾಗುವುದು ಎಂದು ತಿಳಿಸಿರುತ್ತಾರೆ.

ಆರೋಗ್ಯ ಪರಿವೀಕ್ಷಕರು ಮಾತನಾಡಿ ಕಸ ವಿಂಗಡಣೆ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಬಗ್ಗೆ ಕ್ರಮ ವಹಿಸಲಾಗುತ್ತಿದೆ ಎಂದು ತಿಳಿಸಿರುತ್ತಾರೆ.

ಪು.ತಿ.ನೋ.

Scanned with CamScanner

ಪೀಣ್ಯ ಕೈಗಾರಿಕೆಗಳರುವ ರಸ್ತೆಗಳಲ್ಲಿ ಕೈಗಾರಿಕಾ ಸಾಮಗ್ರಿಗಳನ್ನು ಹಾಕುತ್ತಿದ್ದು, ಸಾರ್ವಜನಿಕರ ಹಾಗೂ ವಾಹನಗಳ ಚಲನ ವಲನಕ್ಕೆ ತೊಂದರೆಯಾಗುತ್ತಿರುತ್ತದೆ ಎಂದು ಸಾರ್ವಜನಿಕರು ದೂರಿದ್ದು, ಇದರ ಬಗ್ಗೆ ಆಸ್ತಿ ಮಾಲೀಕರಿಗೆ ನೋಟೀಸ್ ನೀಡುವುದಾಗಿ ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ.

ಎಸ್.ಆರ್.ಎಸ್. ಸಿಗ್ನಲ್ ಬಳಿ ಆಶ್ರಯ ನಗರಕ್ಕೆ ಹೋಗುವ ದಾರಿಯಲ್ಲಿ ಮ್ಯಾನ್‌ಹೋಲ್ ಸಮಸ್ಯೆ ಇದ್ದು, ಅದನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರಿಗೆ ತಿಳಿಸುವುದಾಗಿ ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ.

ಎಸ್.ಆರ್.ಎಸ್. ರಸ್ತೆಯಲ್ಲಿರುವ ಡೆಲ್ ಕೋರ್ ಸಂಸ್ಥೆಯವರು ಪಾದಚಾರಿ ರಸ್ತೆಯಲ್ಲಿ ತಮ್ಮ ವಾಹನಗಳನ್ನು ನಿಲ್ಲಿಸುತ್ತಿದ್ದು, ಸದರಿ ಸಂಸ್ಥೆಗೆ ನೋಟೀಸ್ ನೀಡುವುದಾಗಿ ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ.

ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಬೆಸ್ಕಾಂ ರವರೇಉ ಕೇಬಲ್ ಅಳವಡಿಸಲು ಗುಂಡಿ ತೆಗೆದು ಮುಚ್ಚದಿರುವುದು ಕಂಡುಬಂದಿದ್ದು, ಅದನ್ನು ಬೆಸ್ಕಾಂ ಸಹಾಯಕ ಅಭಿಯಂತರರು ರವರೊಡನೆ ಮಾತನಾಡುವುದಾಗಿ ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ.

ವಾರ್ಡ್ ಕಛೇರಿಯ ರಸ್ತೆಯಲ್ಲಿ Desilting of Drains ಅದನ್ನು ಕೂಡಲೇ ತುರ್ತು ಕಾರ್ಯ ಯೋಜನೆಯಡಿಯಲ್ಲಿ ಎಸ್ಟಿಮೇಟ್ ಸಿದ್ಧಪಡಿಸಿ ಕೆಲಸ ಕೈಗೊಳ್ಳುವುದಾಗಿ ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳಾದ ಹೆಚ್. ಭೀಮೇಶ್. ರವರು ಎಲ್ಲಾರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

B. Sa[illegible]

ಸದಸ್ಯ ಕಾರ್ಯದರ್ಶಿ ಹಾಗೂ
ಕಂದಾಯ ಪರಿವೀಕ್ಷಕರು
ವಾರ್ಡ್ ಸಂಖ್ಯೆ.38

**ಪ್ರತಿಯನ್ನು:**

1. ಮಾನ್ಯ ಆಯುಕ್ತರ ಆಪ್ತ ಸಹಾಯಕರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2. ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನಗೆ ಸಲ್ಲಿಸಿದೆ.
3. ವಲಯ ಆಯುಕ್ತರು ರಾಜರಾಜೇಶ್ವರಿನಗರ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು ರಾಜರಾಜೇಶ್ವರಿನಗರವಲಯ ರವರ ಅವಗಾಹನೆಗೆ ಸಲ್ಲಿಸಿದೆ.
5. ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.

Scanned with CamScanner